

ಅತಿಕ್ರಮಿಸಿಕೊಂಡು ಹೋಮ್ ಸ್ಟೇಗಳೂ ತಲೆಯೆತ್ತಿವೆ. 'ಬಫರ್ ವಲಯ'ವನ್ನೂ ಒತ್ತುವರಿ ಬಿಟ್ಟಿಲ್ಲ. ನದಿಪಾತ್ರವೇ ಕಿರಿದಾಗಿರುವಾಗ 'ಕಾವೇರಿ' ಸರಾಗವಾಗಿ ಹರಿಯುವುದಾದರೂ ಹೇಗೆ? ಮಳೆ ಹೆಚ್ಚಾದರೆ ಉದ್ದಕ್ಕೂ ಆಪೋಶನ ಪಡೆಯುತ್ತಲೇ ಸಾಗುತ್ತಿದ್ದಾಳೆ. ಜಲಾವೃತ ಸಾಮಾನ್ಯ ಪ್ರಕ್ರಿಯೆ ಆಗಿಬಿಟ್ಟಿದೆ! ಇವರನ್ನು ಸ್ಥಳಾಂತರಿಸಿ ಪರ್ಯಾಯ ಸ್ಥಳದಲ್ಲಿ ವಸತಿ ಕಲ್ಪಿಸಬೇಕಿದ್ದ ಸರ್ಕಾರ ಮಾತ್ರ ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತಿಲ್ಲ.

ಕೊಡಗಿನಲ್ಲಿ ಕಾಡಿನ ನಾಶ ಹೆಚ್ಚುತ್ತಿದೆ. ಭೂಕುಸಿತಕ್ಕೆ ಅರಣ್ಯ ನಾಶವೂ ಪ್ರಮುಖ ಕಾರಣವೆಂದು 2018ರಲ್ಲಿ ಭೂವಿಜ್ಞಾನಿಗಳು ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿದ್ದರು. ಗುಡ್ಡಗಾಡು ವ್ಯಾಪ್ತಿಯಲ್ಲಿ ರಸ್ತೆ ನಿರ್ಮಾಣಕ್ಕೆ ಅವೈಜ್ಞಾನಿಕವಾಗಿ ಬೆಟ್ಟ ಸಮತಟ್ಟು ಮಾಡಲಾಗಿದೆ. ಬೆಟ್ಟವನ್ನೇ ಕತ್ತರಿಸಿ ರಸ್ತೆ ನಿರ್ಮಿಸಲಾಗಿದೆ. ಇದು ನಿಲ್ಲದಿದ್ದರೆ ದೊಡ್ಡ ಅಪಾಯವಿದೆ ಎಂದು ಎಚ್ಚರಿಕೆ ನೀಡಿದ್ದರು. ಆ ವರದಿ ಮೂಲೆ ಸೇರಿಬಿಟ್ಟಿದೆ ಎಂಬುದು ಪರಿಸರ ಪ್ರೇಮಿಗಳ ನೋವು. ಭೂವಿಜ್ಞಾನಿಗಳು ನೀಡಿದ್ದ ಸುಧಾರಣಾ ಕ್ರಮಗಳ ವರದಿಯನ್ನು ಜಾರಿಗೊಳಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ.

## ನಾವೇ ತಂದುಕೊಂಡ ಆಪತ್ತು

'ಭಾಗಮಂಡಲದಿಂದ ಜಿಲ್ಲೆಯ ಗಡಿ ಪ್ರದೇಶವಾದ ಶಿರಂಗಾಲದವರೆಗೆ ಕಾವೇರಿ ನದಿಯಲ್ಲಿ ನೀರಿನ ಸರಾಗ ಹರಿಯುವಿಕೆಗೆ ಅಡ್ಡಿ ಆಗುತ್ತಿದೆ. ನದಿ ಪಕ್ಕದ ತಗ್ಗುಪ್ರದೇಶಕ್ಕೆ ಸಾವಿರಾರು ಲೋಡ್ ಮಣ್ಣು, ಕಲ್ಲು ಹಾಕಿ ಮುಚ್ಚಿ ನಿವೇಶನವಾಗಿ ಪರಿವರ್ತಿಸಲಾಗಿದೆ. ಕುಶಾಲನಗರದಲ್ಲಿ ನದಿ ಪಾತ್ರಗಳೇ ಬಡಾವಣೆಗಳಾಗಿವೆ. 10 ವರ್ಷಗಳ ಹಿಂದೆ ಖಾಲಿಯಿದ್ದ ಪ್ರದೇಶಗಳಲ್ಲಿ ಮೂರು, ನಾಲ್ಕು ಅಂತಸ್ತಿನ ಮನೆ ತಲೆಯೆತ್ತಿವೆ. ಅವೈಜ್ಞಾನಿಕ ಅಭಿವೃದ್ಧಿಯಿಂದ ನಾವೇ ಆಪತ್ತು ತಂದುಕೊಂಡಿದ್ದೇವೆ' ಎಂಬ ವಾದವನ್ನು 'ಕಾವೇರಿ ನದಿ ಸ್ವಚ್ಛತಾ ಆಂದೋಲನ ಸಮಿತಿ'ಯ ರಾಜ್ಯ ಸಂಚಾಲಕ ಎಂ.ಎನ್.ಚಂದ್ರಮೋಹನ್ ಮುಂದಿಡುತ್ತಾರೆ.

'ಕಾವೇರಿ, ಲಕ್ಷ್ಮಣತೀರ್ಥ ನದಿಗಳು ಮೂಲ ಅಸ್ತಿತ್ವವನ್ನೇ ಕಳೆದುಕೊಂಡಿವೆ. ನದಿಯಲ್ಲಿ ಅಪಾರ ಪ್ರಮಾಣದ ಹೂಳು ತುಂಬಿಕೊಂಡಿದೆ. ಮರಳು ತೆಗೆಯಲು ಅವಕಾಶವಿಲ್ಲ. ₹ 88 ಲಕ್ಷ ವೆಚ್ಚದಲ್ಲಿ ಕಾವೇರಿ ನದಿಯಲ್ಲಿ ಹೂಳು ತೆಗೆಯುವ ಕಾರ್ಯ ಆರಂಭಿಸಿದ್ದರೂ, ಕೆಲಸ ಸ್ಥಗಿತವಾಗಿದೆ. ಹೂಳು ತೆಗೆದರೆ ಮಾತ್ರ ಉಳಿಗಾಲ' ಎಂಬುದು ಚಂದ್ರಮೋಹನ್ ಅವರ ವಾದ.

## ವ್ಯಾಪಾರೀಕರಣದ ಅಬ್ಬರ

ಅತಿಯಾಗಿ ಪ್ರವಾಸೋದ್ಯಮಕ್ಕೆ ತೆರೆದುಕೊಂಡ ಬಳಿಕ ಜಿಲ್ಲೆಯಲ್ಲಿ ಹೋಮ್ ಸ್ಟೇ ಹಾವಳಿ ಹೆಚ್ಚಾಗಿದೆ. ಸುಮಾರು ನಾಲ್ಕು ಸಾವಿರ ಹೋಮ್ ಸ್ಟೇಗಳು ಕೊಡಗಿನಲ್ಲಿವೆ ಎನ್ನುವುದು ಜಿಲ್ಲೆ ಪ್ರವಾಸೋದ್ಯಕ್ಕ ಯಾವ ಪರಿಯಲ್ಲಿ ತನ್ನನ್ನು ತೆತ್ತುಕೊಂಡಿದೆ ಎನ್ನುವುದಕ್ಕೆ ಉದಾಹರಣೆಯಂತಿದೆ. ಬೆಟ್ಟಗಳನ್ನು ಸಮತಟ್ಟು ಮಾಡಿ, ಆ ಸ್ಥಳದಲ್ಲಿ ಹೋಮ್ ಸ್ಟೇಗಳನ್ನು ನಿರ್ಮಿಸಲಾಗಿದೆ. ಈಗ ಅಲ್ಲಿ ಬೆಟ್ಟಗಳು ನೆಲಸಮವಾಗುತ್ತಿವೆ. ಜಿಲ್ಲೆಗೆ ಬರುವ ಪ್ರವಾಸಿಗರನ್ನು ಜೀಪುಗಳು ಕರೆದೊಯ್ಯುತ್ತವೆ (ಕೊರೊನಾ ಕಾರಣಕ್ಕೆ ಪ್ರವಾಸೋದ್ಯಮ ಚಟುವಟಿಕೆಗಳು ಸ್ಥಗಿತಗೊಂಡಿವೆ). ಮಾಂದಲ್‌ಪಟ್ಟಿ, ತಲಕಾವೇರಿ – ಹೀಗೆ ನಾನಾ

## ಮಳೆ ಹೆಚ್ಚು, ಮಣ್ಣು ಮೆದು

'ವಾತಾವರಣದಲ್ಲಿನ ಏರುಪೇರು, ಪ್ರಾಕೃತಿಕ ಅಸಮತೋಲನ ಅನಾಹುತ ಸೃಷ್ಟಿಸುತ್ತಿದೆ. ಒಂದೇ ವಾರದಲ್ಲಿ ನೂರು ಇಂಚಿನಷ್ಟು ಮಳೆ ಸುರಿಯುತ್ತಿದೆ. ಕಡಿಮೆ ಅವಧಿಯಲ್ಲಿ ಹೆಚ್ಚು ಮಳೆ ಆಗುತ್ತಿರುವುದೂ ಅನಾಹುತಕ್ಕೆ ಕಾರಣವಿರಬಹುದು. ಪುಷ್ಪಗಿರಿಯಿಂದ ಗಡಿಗ್ರಾಮವಾದ ಕುಟ್ಟದವರೆಗೆ ಘಟ್ಟ ಪ್ರದೇಶ ವ್ಯಾಪಿಸಿದೆ. ಹಲವು ವರ್ಷ ಈ ರೀತಿಯ ಸಂಕಷ್ಟ ಎದುರಿಸಲು ನಾವು ಸಿದ್ಧರಾಗಬೇಕು' ಎಂದು 'ಕೂರ್ಗ್ ವೈಲ್ಡ್‌ಲೈಫ್ ಸೊಸೈಟಿ'ಯ ಮಾಜಿ ಅಧ್ಯಕ್ಷ, ನಿವೃತ್ತ ಕರ್ನಲ್ ಸಿ.ಪಿ. ಮುತ್ತಣ್ಣ ಎಚ್ಚರಿಸುತ್ತಾರೆ.

'ಪಶ್ಚಿಮಘಟ್ಟವು ಅತ್ಯಂತ ಸೂಕ್ಷ್ಮ ಪ್ರದೇಶ. ಮಳೆ ಹೆಚ್ಚು, ಮಣ್ಣು ಮೆದು. ಮಳೆ ನಿಲ್ಲಿಸುವುದು ನಮ್ಮಿಂದ ಸಾಧ್ಯವಿಲ್ಲ. ಆದರೆ, ಅನಾಹುತ ತಪ್ಪಿಸಲು ಪ್ರಯತ್ನಿಸಬಹುದು. ಸೂಕ್ಷ್ಮ ಬೆಟ್ಟದಲ್ಲಿ ಹೆದ್ದಾರಿ ನಿರ್ಮಾಣ, ರೈಲು ಸಂಪರ್ಕ, ರೆಸಾರ್ಟ್, ಮೇಲ್ಸೇತುವೆ, ಕಾಲೊನಿಗಳ ನಿರ್ಮಾಣ ಒಳ್ಳೆಯದಲ್ಲ. ಪ್ರವಾಸೋದ್ಯಮಕ್ಕೆ ಕಡಿವಾಣ ಹಾಕಬೇಕು. ಸೂಕ್ಷ್ಮ ಪ್ರದೇಶವಾದ ಭಾಗಮಂಡಲದಲ್ಲಿ ದೊಡ್ಡ ಸೇತುವೆ ನಿರ್ಮಿಸಲಾಗುತ್ತಿದೆ. ಆಳಕ್ಕೆ ಭೂಮಿ ಅಗೆದರೆ ಭೂಕುಸಿತ ಸಂಭವಿಸದೇ ಇರುತ್ತದೆಯೇ? ವಾಣಿಜ್ಯ ಉದ್ದೇಶಕ್ಕೆ ಭೂಪರಿವರ್ತನೆ ಮಾಡುವುದನ್ನು ನಿಲ್ಲಿಸಬೇಕು' ಎಂದು ಮುತ್ತಣ್ಣ ಹೇಳುತ್ತಾರೆ.